<u>**ಕರ್ನಾಟಕ ವಿಧಾನ ಪರಿಷತ್ತು**</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 827 (970) |
| ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | 11-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರ ಕರ್ನಾಟಕದಲ್ಲಿ ಎಂದಿನಿಂದ ಇ ಸ್ಟಾಂಪಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿರುತ್ತದೆ; | ಇ-ಸ್ಟಾಂಪಿಂಗ್ ವ್ಯವಸ್ಥೆಯು ದಿನಾಂಕ:14-03-2008 ರಿಂದ ಬೆಂಗಳೂರು ನಗರದ 8 ಕೇಂದ್ರದಲ್ಲಿ ಜಾರಿಗೆ ತರಲಾಗಿರುತ್ತದೆ ಹಾಗೂ ದಿನಾಂಕ:04-05-2009 ರಲ್ಲಿ ರಾಜ್ಯಾದ್ಯಂತ ಇ-ಸ್ಟಾಂಪಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ. |
| ಆ | ರಾಜ್ಯ ಸರ್ಕಾರ ನೋಂದಾವಣಿ ಇಲಾಖೆಯ ಮೂಲಕ ಯಾವ ಖಾಸಗಿ ಸಂಸ್ಥೆಗೆ ಇ ಸ್ಟಾಂಪಿಂಗ್ ಜೊತೆ ಒಪ್ಪಂದವನ್ನು ಮಾಡಿಕೊಂಡಿರುತ್ತದೆ; ಅವರಿಗೆ ನೀಡುತ್ತಿರುವ ಕಮಿಷನ್ ಶೇಕಡವಾರು ಕಮಿಷನ್ ಎಷ್ಟು; ಯೋಜನೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಆ ಸಂಸ್ಥೆಗೆ ಎಷ್ಟು ಕಮಿಷನ್ ಪಾವತಿ ಮಾಡಲಾಗಿರುತ್ತದೆ; | ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ರವರೊಂದಿಗೆ ಸಾರ್ವಜನಿಕರಿಗೆ ಇ-ಸ್ಟಾಂಪ್ ಮುದ್ರಿಸಿ ನೀಡಿ ಮುದ್ರಾಂಕ ಶುಲ್ಕ ಸಂಗ್ರಹಿಸಲು ಕರಾರು ಮಾಡಿಕೊಂಡಿರುತ್ತದೆ.<br><br>ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಮಾರಾಟ ಮಾಡುವ ಪ್ರತಿ ಇ-ಸ್ಟಾಂಪ್ ಸರ್ಟಿಫಿಕೇಟ್‌ಗೆ ಶೇಕಡ 0.65%ರ ದರದಲ್ಲಿ ಕಮೀಷನ್‌ನ್ನು ಸದರಿ ಸಂಸ್ಥೆಗೆ ಸರ್ಕಾರ ನೀಡಬೇಕಿರುತ್ತದೆ. ಇಲ್ಲಿಯವರೆಗೂ ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್‌ರವರಿಗೆ 2024-2025ನೇ ಸಾಲಿನವರೆಗೆ ರೂ.76,21,13,446 ಕಮೀಷನ್ ಮೊತ್ತವನ್ನು ಪಾವತಿಸಲಾಗಿದೆ.<br><br>ವರ್ಷವಾರು ಕಮೀಷನ್ ಮೊತ್ತದ ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಿದೆ. |
| ಇ | ಇ ಸ್ಟಾಂಪಿಂಗ್ ಸಂಬಂಧ ಖಾಸಗಿ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಕರಾರಿನ ಅವಧಿ ಎಷ್ಟು; ಕರಾರಿನ ಪ್ರತಿ ಮತ್ತು ವಿವರಗಳನ್ನು ಒದಗಿಸುವುದು; | ಇ-ಸ್ಟಾಂಪಿಂಗ್ ಸಂಬಂಧ ಖಾಸಗಿ ಸಂಸ್ಥೆಯಾದ ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ರವರೊಂದಿಗೆ ವಾರ್ಷಿಕವಾಗಿ ಕರಾರು ಮಾಡಿಕೊಂಡಿದ್ದು, ಪ್ರಸ್ತುತ ಕರಾರಿನ ಅವಧಿಯು ದಿನಾಂಕ:31-03-2025 ರಂದು ಮುಕ್ತಾಯಗೊಂಡಿರುತ್ತದೆ. |

| | | |
|---|---|---|
| | | ಆದೇಶವನ್ನು **ಅನುಬಂಧ-2** ರಲ್ಲಿ ನೀಡಿದೆ. |
| ಈ | ರಾಜ್ಯ ಸರ್ಕಾರದ ನೋಂದಾವಣಿ ಇಲಾಖೆಯ ರಾಜ್ಯದಲ್ಲಿ ಒಟ್ಟು ಎಷ್ಟು ಸಂಸ್ಥೆಗಳಿಗೆ ಇ ಸ್ಟಾಂಪಿಂಗ್ ಮಾರಾಟ ಮಾಡಲು ಅವಕಾಶ ನೀಡಿರುತ್ತದೆ; ಪ್ರತಿ ವರ್ಷ ಎಷ್ಟು ಸಂಸ್ಥೆಗಳಿಗೆ ಕಮಿಷನ್ ರೂಪದಲ್ಲಿ ಹಣ ಪಾವತಿ ಮಾಡಲಾಗುತ್ತಿದೆ? (ಜಿಲ್ಲಾವಾರು ಸಂಸ್ಥೆಗಳ ವಿವರಗಳನ್ನು ಮತ್ತು ಅವರಿಗೆ ನೀಡಿರುವ ಕಮಿಷನ್ ವಿವರಗಳನ್ನು ನೀಡುವುದು) | ನೋಂದಣಿ, ಮತ್ತು ಮುದ್ರಾಂಕ ಇಲಾಖೆಯು ಪ್ರಸ್ತುತ ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ರವರನ್ನು ಕೇಂದ್ರ ದಾಖಲೆ ಸಂಗ್ರಹ ಏಜೆನ್ಸಿಯಾಗಿ ನೇಮಿಸಿಕೊಂಡಿದ್ದು, ಸದರಿ ಸಂಸ್ಥೆಗೆ ಇ-ಸ್ಟಾಂಪ್ ಮಾರಾಟ ಮಾಡಲು ಅನುಮತಿ ನೀಡಿರುತ್ತದೆ. ಈ ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಸಂಸ್ಥೆಯ 16 ಪ್ರಮುಖ ಖಾಸಗಿ, ವಾಣಿಜ್ಯ ಸಹಕಾರ ಸಂಘಗಳು ಮುಂತಾದ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಇ-ಸ್ಟಾಂಪ್ ಮಾರಾಟ ಮಾಡಲು ಅನುಮತಿ ನೀಡಿರುತ್ತದೆ.<br><br>ಮುಂದುವರೆದು, ಸದರಿ 16 ಸಂಸ್ಥೆಗಳ ಅಡಿಯಲ್ಲಿ ರಾಜ್ಯಾದ್ಯಂತ ಒಟ್ಟು 6800 ಸಕ್ರಿಯ ಕೇಂದ್ರಗಳಿಗೆ ಇ-ಸ್ಟಾಂಪ್ ಮಾರಾಟ ಮಾಡಲು ಅವಕಾಶ ನೀಡಿರುತ್ತದೆ ಪ್ರತಿ ಮಾರಾಟ ಕೇಂದ್ರವು ನೀಡುವ ಪ್ರತಿ ಸರ್ಟೀಫಿಕೇಟ್‌ಗೆ 100 ಮುಖಬೆಲೆಯ ಇ-ಸ್ಟಾಂಪ್‌ಗೆ ರೂ.10, ರೂ.101 ರಿಂದ 5000 ಮುಖಬೆಲೆಯವುಳ್ಳ ಇ-ಸ್ಟಾಂಪ್ ಪೇಪರಗೆ ರೂ.15 ರಂತೆ ಸೇವಾ ಶುಲ್ಕವನ್ನು ಸಾರ್ವಜನಿಕರಿಂದ ಪಡೆಯಲು ಅನುಮೋದನೆ ನೀಡಲಾಗಿರುತ್ತದೆ ಉಳಿದ ಆಯಾ ವರ್ಷ ಸಂಗ್ರಹವಾಗಿರುವ ಮುದ್ರಾಂಕ ಶುಲ್ಕಕ್ಕೆ 0.65% ರಷ್ಟು ಕಮೀಷನ್ ಅನ್ನು ಮೆ\|\| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ರವರಿಗೆ ಪಾವತಿಸಲಾಗಿರುತ್ತದೆ. |

ಕಂಇ/70/ಎಂಎಸ್‌ಎಸ್‌ಎ/2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| Year | Stamp Duty Collection in Rs. | Commission in Rs. |
|---|---|---|
| 2008-2009 | 21,83,73,070 | 14,28,672 |
| 2009-2010 | 45,60,66,564 | 29,83,828 |
| 2010-2011 | 2,06,18,17,802 | 1,34,89,497 |
| 2011-2012 | 4,28,99,52,923 | 2,80,67,130 |
| 2012-2013 | 4,24,57,73,481 | 2,77,94,663 |
| 2013-2014 | 4,49,77,30,111 | 2,94,50,333 |
| 2014-2015 | 5,45,91,51,959 | 3,57,28,410 |
| 2015-2016 | 6,82,51,17,984 | 4,46,53,515 |
| 2016-2017 | 6,31,63,99,640 | 4,13,25,212 |
| 2017-2018 | 6,73,92,10,195 | 4,40,91,461 |
| 2018-2019 | 7,32,14,78,647 | 4,79,00,967 |
| 2019-2020 | 6,79,93,25,104 | 4,44,84,764 |
| 2020-2021 | 6,72,90,83,149 | 4,40,25,204 |
| 2021-2022 | 9,05,33,62,650 | 5,92,31,864 |
| 2022-2023 | 10,36,86,08,143 | 6,78,36,893 |
| 2023-2024 | 12,04,00,11,234 | 7,87,72,092 |
| 2024-2025 | 23,05,66,80,464 | 15,08,48,941 |

SHCIL JC ROAD BANGALORE

ಅನುಬಂಧ - 2

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮೆ|| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., (SHCIL) E-Stamping ಕರಾರು ಅವಧಿಯನ್ನು ವಿಸ್ತರಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ/26/ಎಂಎನ್‌ಎಂಯು/2021 ದಿನಾಂಕ: 03-03-2021.
2. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಪತ್ರ ಸಂಖ್ಯೆ: ಇ-ಸ್ಟಾಂಪ್/04/2007-08 ದಿನಾಂಕ: 03-02-2022.
3. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಕಡತ ಸಂಖ್ಯೆ : IGR CS/STP/e-ST/1/2023 Part (1).

*****

**ಪ್ರಸ್ತಾವನೆ:**

ಮೆ:ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಬೆಂಗಳೂರು (M/s. Stock Holding Corporation of India Ltd) ರವರೊಂದಿಗಿನ ಕರಾರು ಅವಧಿಯನ್ನು ಸಾರ್ವಜನಿಕರಿಂದ ಸೇವಾ ಶುಲ್ಕವನ್ನು ಪಡೆಯುವುದಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಕಂಇ 97 ಮುನೋಮು 2009 ದಿನಾಂಕ: 16-12-2009 ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗೆ ಹಾಗೂ ಕಛೇರಿಯಲ್ಲಿ ಮಾಡಿಕೊಂಡ ಕರಾರಿನ ನಿಬಂಧನೆಗಳಿಗೆ ಒಳಪಟ್ಟು ಹಾಗೂ ಇಲಾಖೆಯು ಕರಾರು ವಿಸ್ತರಿಸಿದ ಅವಧಿಗಿಂತ ಮೊದಲು ರದ್ದುಪಡಿಸಬೇಕಾದಲ್ಲಿ ಎರಡು ತಿಂಗಳ ಮೊದಲು ನೋಟೀಸ್ ನೀಡುವ ಷರತ್ತಿಗೊಳಪಟ್ಟು, ದಿನಾಂಕ:24-01-2021 ರಿಂದ 24-01-2022 ರವರೆಗೆ ಅಂದರೆ ಒಂದು ವರ್ಷದ ಅವಧಿಗೆ ವಿಸ್ತರಿಸಿ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ಇ-ಸ್ಟಾಂಪಿಂಗ್ ಪದ್ಧತಿಯನ್ನು ಅನುಷ್ಠಾನಗೊಳಿಸಲು ನೇಮಿಸಿಕೊಳ್ಳಲು ಉದ್ದೇಶಿಸಿರುವ ಬ್ಯಾಂಕುಗಳು, ವಿತ್ತ ಸಂಸ್ಥೆಗಳು, ಅಂಚೆ ಕಛೇರಿಗಳು ಮುಂತಾದ ಸಂಸ್ಥೆಗಳು ಅಂದರೆ ಅಥರೈಸ್ಡ್ ಕಲೆಕ್ಷನ್ ಸೆಂಟರ್ (ACC) ಗಳು ಮಾರಾಟ ಮಾಡುವ ಪ್ರತಿ ಇ-ಸ್ಟಾಂಪಿಂಗ್ ಸರ್ಟಿಫಿಕೇಟ್‌ಗೆ ಅಂದರೆ ರೂ.100/- ಮುಖ ಬೆಲೆಯವರೆಗೂ ರೂ.10/- ಹಾಗೂ ರೂ.101/- ರಿಂದ ರೂ.5,000/- ಮುಖಬೆಲೆಯುಳ್ಳ ಸರ್ಟಿಫಿಕೇಟ್‌ಗೆ ರೂ.15/- ರಂತೆ ಸೇವಾ ಶುಲ್ಕವನ್ನು ಸಾರ್ವಜನಿಕರಿಂದ ಪಡೆಯಲು ಅನುಮತಿ ನೀಡಿ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಆದೇಶಿಸಲಾಗಿತ್ತು.

ಇ-ಸ್ಟಾಂಪಿಂಗ್ ವ್ಯವಸ್ಥೆಯು ಮುಂದುವರೆಯಲು ಮೆ|| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ರವರು ದಿನಾಂಕ: 25-01-2022 ರಿಂದ 24-01-2023 ರವರೆಗಿನ ಒಂದು ವರ್ಷದ ಕರಾರು ನವೀಕರಣದಂತೆ ಕರಾರು ಅವಧಿಯನ್ನು ಒಂದು ವರ್ಷದ ಅವಧಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಸ್ತುತ ಕರಾರಿನ ನಿಬಂಧನೆಗಳಂತೆ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಿರುವ ಸೇವಾ ದರಗಳನ್ನು ACC ರವರು ಪಡೆಯುವ ಅನುಮತಿಯನ್ನು ವಿಸ್ತರಿಸುವಂತೆ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ಕೋರಿರುತ್ತಾರೆ.

. . . 2

ಮೆ|| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., (SHCIL) ಬೆಂಗಳೂರು ಇವರ E-Stamping ಸೇವೆಯ ಕರಾರು ಅವಧಿಯು ದಿನಾಂಕ: 24-01-2022ಕ್ಕೆ ಪೂರ್ಣಗೊಂಡಿದ್ದು, ಇ-ಸ್ಟಾಂಪಿಂಗ್ ವ್ಯವಸ್ಥೆಯನ್ನು ಮುಂದುವರೆಯಲು ಮೆ|| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., (SHCIL) ಇವರಿಗೆ ದಿನಾಂಕ: 25-01-2022 ರಿಂದ 24-01-2023 ರವರೆಗೆ ಕರಾರು ಅವಧಿಯನ್ನು ಒಂದು ವರ್ಷದ ಅವಧಿಗೆ ನವೀಕರಿಸುವಂತೆ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಏಕ ಕಡತದಲ್ಲಿ ಕೋರಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಇವರ ಪ್ರಸ್ತಾವನೆಯನ್ನು ನಿಯಾಮನುಸಾರ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಂಇ/14/ಎಂಎಸ್‌ಎಂಯು/2022</u>**
**<u>ಬೆಂಗಳೂರು, ದಿನಾಂಕ: 20-02-2025</u>**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ|| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಬೆಂಗಳೂರು ಇವರು ಮುದ್ರಾಂಕ ಶುಲ್ಕದ ದರಗಳಲ್ಲಿನ ಪರಿಷ್ಕರಣೆಯಿಂದಾಗಿ ಹೆಚ್ಚುವರಿ ಕಮಿಷನ್ ಪಡೆಯದಂತೆ ಕರಾರು ಅವಧಿಯನ್ನು ದಿನಾಂಕ: 25-01-2022 ರಿಂದ 31-03-2025 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 147 Exp-7/2021 ದಿನಾಂಕ: 28-01-2025 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಆರ್.ಶಿವಶಂಕರ್)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ಪಿ.ನಿ., ನೋಂದಣಿ ಮತ್ತು ಮುದ್ರಾಂಕ)

20/2/25

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ&ಇ), ಅಂಚೆ ಪೆಟ್ಟಿಗೆ ಸಂಖ್ಯೆ: 5329, ಪಾರ್ಕ್‌ಹೌಸ್ ರಸ್ತೆ, ಕರ್ನಾಟಕ, ಬೆಂಗಳೂರು-560001.
2. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.
3. ಪೋಸ್ಟ್ ಮಾಸ್ಟರ್ ಜನರಲ್, ಜಿಪಿಒ ಕಛೇರಿ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560001.
4. ಮೆ|| ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ, ಬ್ರಾಂಚ್ ಆಫೀಸ್, ನಂ.51, 1ನೇ ಕ್ರಾಸ್, ಬಿಜಿಎಸ್‌ಇ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು-560027.
5. ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ-ಐಜಿಆರ್ ಮೂಲಕ.

. . . 3